**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಎಸ್‌ಡಿ-5:ಹಂಚಿಕೆ:(ಪ):02:2010-11

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಆಹಾರ ) ರಾಯಚೂರು
ದಿನಾಂಕ:27-04-2010

**ಅಧಿಕೃತ ಜ್ಞಾಪನ**

ವಿಷಯ:- ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ 2010ನೇ ಮೇ ಮಾಹೆಗೆ ಅ.ಪ ಮತ್ತು ಪಟ್ಟಣ ಪ್ರದೇಶದ ಅಂತ್ಯೋದಯ, ನೆಮ್ಮದಿ ಪೂರ್ವ ಮತ್ತು ನೆಮ್ಮದಿ ಅಕ್ಷಯ ಪಡಿತರ ಚೀಟಿಗಳಿಗೆ ಆಹಾರ ಧಾನ್ಯಗಳ ಹಂಚಿಕೆ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು ಆನಾಸ ಮತ್ತು ಗ್ರಾ.ವ್ಯ.ಗಳ ಇಲಾಖೆ ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಎಫ್‌ಎಸ್:ಪಿಡಿ:III:9:2010-11:ದಿನಾಂಕ:20-04-2010

*****

ಉಲ್ಲೇಖಿತ ಅಧಿಕೃತ ಜ್ಞಾಪನದಲ್ಲಿ ಆಯುಕ್ತರು ಆಹಾರ ಇಲಾಖೆ ಬೆಂಗಳೂರು ಇವರು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ **ಮೇ- 2010** ನೇ ಮಾಹೆಗೆ ಅಂತ್ಯೋದಯ , ನೆಮ್ಮದಿ ಪೂರ್ವ ಮತ್ತು ನೆಮ್ಮದಿ ಅಕ್ಷಯ ಪಡಿತರ ಚೀಟಿದಾರರಿಗೆ ವಿತರಿಸಲು ಅಕ್ಕಿ ಹಾಗೂ ಗೋದಿಯನ್ನು ಈ ಕೆಳಕಂಡ ಪ್ರಮಾಣದಲ್ಲಿ ಬಿಡುಗಡೆ ಮಾಡಿರುತ್ತಾರೆ ಹಾಗೂ ಯೂನಿಟ ಪದ್ಧತಿ ಅನುಸರಿಸಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದ ಪ್ರತಿ ಒಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ 1 ಕೆಜಿ.ಗೋದಿ ವಿತರಿಸಲು ಆದೇಶಿಸಿರುತ್ತಾರೆ.

( ಪ್ರಮಾಣ ಕ್ವಿಂಟಲಗಳಲ್ಲಿ )

| ಕ್ರ. ಸಂ | ಪಡಿತರ ವಸ್ತುಗಳು | ಅಂತ್ಯೋದಯ | | ಬಿಪಿಎಲ್ | ಇಬಿಪಿಎಲ್ | ನೆಮ್ಮದಿ ಇಬಿಪಿಎಲ್ | Adhoc/ ಹೆಚ್ಚುವರಿ ಹಂಚಿಕೆ FCI ಯಿಂದ ಎತ್ತುವಳಿ ಮಾಡಬೇಕಾದ ಪ್ರಮಾಣ | | ಪೋಲಿಸ |
|---|---|---|---|---|---|---|---|---|---|
| | | ಬೇಡಿಕೆ | FCI ಯಿಂದ ಎತ್ತುವಳಿ ಮಾಡಬೇಕಾದ ಪ್ರಮಾಣ | | | | ಜನೆವರಿ-10 | ಫೆಬ್ರವರಿ-10 | |
| 1 | ಅಕ್ಕಿ | 14449.10 | 17450.00 | 12980.00 | 8740.00 | 11270.00 | 6150.00 | - | 170.00 |
| 2 | ಗೋದಿ | 2989.10 | 3650.00 | 2760.00 | 780.00 | 1270.00 | - | 1310.00 | 30.00 |

ಜಿಲ್ಲೆಗೆ ಹಂಚಿಕೆ ನೀಡಿರುವ ಗೋದಿಯ ಪ್ರಮಾಣದಲ್ಲಿ ಬಿಪಿಎಲ್ ಪಡಿತರ ಟೀಟಿದಾರರಿಗೆ 1 ಮತ್ತು 2ನೇ ಯೂನಿಟಗಳಿಗೆ 1 ಕೆ.ಜಿ., 3ನೇ ಯೂನಿಟಗೆ 2 ಕೆ.ಜಿ. 4 ಮತ್ತು 5 ನೇ ಯೂನಿಟಗಳಿಗೆ 3 ಕೆ.ಜಿ. ಯಂತೆ ಹಂಚಿಕೆ ಮಾಡಲಾಗಿದೆ. ಅಂತ್ಯೋದಯ ಪಡಿತರ ಚೀಟಿದಾರರಿಗೆ ಈ ಹಿಂದೆ ನೀಡುತ್ತಿದ್ದಂತೆಯೇ 29 ಕೆ.ಜಿ ಅಕ್ಕಿ 6 ಕೆ.ಜಿ. ಗೋದಿ ವಿತರಿಸಲು ತಾಲೂಕುವಾರು ಹಂಚಿಕೆ ಮಾಡಲಾಗಿದೆ.

ಮಾನ್ಯ ಆಯುಕ್ತರು ಆಹಾರ ಇಲಾಖೆ ಬೆಂಗಳೂರು ಇವರ ಉಲ್ಲೇಖಿತ ಅಧಿಕೃತ ಜ್ಞಾಪನದಲ್ಲಿರುವ ಸೂಚನೆಗಳಿಗನುಸಾರವಾಗಿ ಈ ಮೇಲಿನಂತೆ ಬಿಡುಗಡೆ ಮಾಡಿದ ಆಹಾರ ಧಾನ್ಯದಲ್ಲಿ **ಜಿಲ್ಲೆಯ ಅ.ಪ ಮತ್ತು ಪಟ್ಟಣ ಪ್ರದೇಶಗಳಿಗೆ** ಅವಶ್ಯವಿರುವ ಪ್ರಮಾಣವನ್ನು ಈ ಕೆಳಗಿನಂತೆ ಮರು ಹಂಚಿಕೆ ಮಾಡಲಾಗಿದೆ.

( ಪ್ರಮಾಣ ಕ್ವಿಂಟಲಗಳಲ್ಲಿ)

| ವಿವರ | ಅಂತ್ಯೋದಯ | | ಬಿಪಿಎಲ್ | | ಇಬಿಪಿಎಲ್ | | ನೆಮ್ಮದಿ ಅಕ್ಷಯ | | ಪೋಲಿಸ | |
|---|---|---|---|---|---|---|---|---|---|---|
| | ಅಕ್ಕಿ | ಗೋದಿ | ಅಕ್ಕಿ | ಗೋದಿ | ಅಕ್ಕಿ | ಗೋದಿ | ಅಕ್ಕಿ | ಗೋದಿ | ಅಕ್ಕಿ | ಗೋದಿ |
| ಪ್ರಾರಂಬದ ಶಿಲ್ಕು | - | - | - | - | - | - | 92.35 | 11.20 | 14.18 | 15.58 |
| ಮಾಹೆ ಹಂಚಿಕೆ | 3153.26 | 652.14 | 2900.94 | 618.68 | 1953.42 | 174.95 | 4949.43 | 795.00 | 182.91 | 42.21 |
| ಒಟ್ಟು | 3153.26 | 652.14 | 2900.94 | 618.68 | 1953.42 | 174.95 | 5041.78 | 806.20 | 197.09 | 57.79 |

**ಪುಟ 2 ಕ್ಕೆ.....**

ಹಂಚಿಕೆ ಮಾಡಿರುವ ಆಹಾರ ಧಾನ್ಯಗಳನ್ನು ಈ ಕೆಳಗೆ ನಮೂದಿಸಿದ ಪ್ರಮಾಣ ಹಾಗೂ ದರಗಳಂತೆ ವಿತರಣೆಗೆ ಕ್ರಮ ಜರುಗಿಸಲು ಜಿಲ್ಲೆಯ ಎಲ್ಲಾ ತಹಸಿಲ್ದಾರರಿಗೆ ಸೂಚಿಸಿದೆ. ತಾಲೂಕುವಾರು ಬಿಡುಗಡೆ ಮಾಡಲಾದ ಅಕ್ಕಿ ಮತ್ತು ಗೋದಿ ಪ್ರಮಾಣವನ್ನು ಅನುಬಂಧ 1 ರಲ್ಲಿ ಅಂತ್ಯೋದಯ , 2ರಲ್ಲಿ ನೆಮ್ಮದಿ ಪೂರ್ವ ಮತ್ತು 3ರಲ್ಲಿ ನೆಮ್ಮದಿ ಬಿಪಿಎಲ್‌ಗೆ ಸಂಬಂಧ ಪಟ್ಟಿದ್ದು ಪ್ರತ್ಯೇಕ ತ:ಖ್ತೆಯನ್ನು ತಯಾರಿಸಿ ಲಗತ್ತಿಸಲಾಗಿದೆ.

ಅ) ಅಂತ್ಯೋದಯ ಪ. ಚೀ. 29 ಕೆಜಿ ಅಕ್ಕಿ ಪ್ರತಿ ಕೆಜಿ ಗೆ ರೂ 3.00 ರಂತೆ ಮತ್ತು 6 ಕೆಜಿ ಗೋದಿ ಪ್ರತಿ ಕೆಜಿ ಗೆ ರೂ 2.00 ರಂತೆ .

ಆ) ಅಕ್ಷಯ ಪಡಿತರ ಚೀಟಿ ಹೊಂದಿರುವ ಕುಟುಂಬದ ಪ್ರತಿ ಒಬ್ಬ ಸದಸ್ಯರನ್ನು ಒಂದು ಯೂನಿಟ್ ಎಂದು ಗಣನೆಗೆ ತೆಗೆದು ಕೊಂಡು ಕನಿಷ್ಟ 4 ಕೆಜಿ 5 ಅಥವಾ ಅದಕ್ಕೆ ಮೇಲ್ಪಟ್ಟು ಸದಸ್ಯರ ಕುಟುಂಬಕ್ಕೆ ಗರಿಷ್ಟ 20 ಕೆಜಿ.ಅಕ್ಕಿ ಪ್ರತಿ ಕೆಜಿ.ಗೆ ರೂ 3.00ರಂತೆ ಮತ್ತು ಕನಿಷ್ಟ 1.ಕೆ.ಜಿ. ಗರಿಷ್ಟ 3 ಕೆಜಿ. ಗೋದಿ ಪ್ರತಿ ಕೆಜಿ ರೂ 3.00 ರಂತೆ ವಿತರಿಸಲು ಸೂಚಿಸಿದೆ.

ಇ) ಎಪಿಎಲ್ ಪಡಿತರ ಚೀಟಿಗಳಿಗೆ ಯಾವುದೇ ರೀತಿಯ ಆಹಾರ ಧಾನ್ಯ ಹಂಚಿಕೆ ಇರುವುದಿಲ್ಲ .

ಈ) ಪೋಲಿಸ ಪಡಿತರ ಚೀಟಿಗಳಿಗೆ 13 ಕೆ.ಜಿ.ಅಕ್ಕಿ ಪ್ರತಿ ಕೆ.ಜಿ.ರೂ.9-00ರಂತೆ 3 ಕೆ.ಜಿ. ಗೋದಿ ಪ್ರತಿ ಕೆ.ಜಿ.ರೂ.6-70ರಂತೆ

**ವಿಶೇಷ ಸೂಚನೆ**

1) ಪ್ರಸಕ್ತ ಮಾಹೆಯಲ್ಲಿ ಆಯುಕ್ತರು ಆಹಾರ ಇಲಾಖೆ ಬೆಂಗಳೂರು ಇವರು ನೇರವಾಗಿ ತಾಲೂಕುವಾರು ಮತ್ತು ನ್ಯಾಯ ಬೆಲೆ ಅಂಗಡಿವಾರು ಆಹಾರಧಾನ್ಯಗಳನ್ನು ಮರು ಹಂಚಿಕೆಯನ್ನು ಸಿದ್ದಪಡಿಸಿ ತ:ಖ್ತೆಗಳನ್ನು ಕಳುಹಿಸಿರುವರು ಸದರಿ ತ:ಖ್ತೆಯನ್ನು ಲಗತ್ತಿಸಿ ಕಳುಹಿಸಲಾಗಿದೆ.
2) ಮಾನ್ಯ ಆಯುಕ್ತರು ಆಹಾರ ಇಲಾಖೆ ಬೆಂಗಳೂರು ಇವರ ಹಂಚಿಕೆಯಲ್ಲಿ ಸೂಚಿಸಿರುವಂತೆ ಸಗಟು ನಾಮಿನಿದಾರರು ಎಲ್ಲಾ ವರ್ಗಕ್ಕೆ ಸಂಬಂಧಪಟ್ಟ ಆಹಾರಧಾನ್ಯಗಳು ಭಾರತ ಆಹಾರ ನಿಗಮಕ್ಕೆ ದಿನಾಂಕ:10-05-2010ರ ಒಳಗಾಗಿ ಹಣವನ್ನು ಪಾವತಿಸಿ ದಿನಾಂಕ:15-05-2010ರ ಒಳಗಾಗಿ ಎತ್ತುವಳಿಗೆ ಕ್ರಮ ಜರುಗಿಸುವುದು.
3) ಆಯಾ ತಾಲೂಕಿನ ಸಗಟು ಮಳಿಗೆಯವರು ದಿನಾಂಕ:20-05-2010ರ ಒಳಗಾಗಿ ಎಲ್ಲಾ ನ್ಯಾಯ ಬೆಲೆ ಅಂಗಡಿಯವರಿಗೆ ನಿಗದಿತ ಪಡಿತರ ವಸ್ತುಗಳನ್ನು ವಿತರಿಸಲು ಹಾಗೂ ಎಲ್ಲಾ ನ್ಯಾಯ ಬೆಲೆ ಅಂಗಡಿಯವರು ಪಡಿತರ ಚೀಟಿದಾರರಿಗೆ ದಿನಾಂಕ:31-05-2010ರ ಒಳಗಾಗಿ ಆಹಾರಧಾನ್ಯಗಳನ್ನು ವಿತರಿಸುವಂತೆ ಸೂಚಿಸಲಾಗಿದೆ.
4) ಕೇಂದ್ರ ಸರಕಾರದಿಂದ ಟಿಪಿಡಿಎಸ್ ಅಡಿ ಫಲಾನುಭವಿಗಳಿಗೆ ವಿತರಿಸಲು ಜನೆವರಿ -2010 ಮತ್ತು ಫೆಬ್ರವರಿ-2010ರ ಮಾಹೆಗೆ ಹೆಚ್ಚುವರಿಯಾಗಿ ಬಿಡುಗಡೆಯಾದ ಆಹಾರಧಾನ್ಯಗಳನ್ನು ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿರುವ ಎಪಿಎಲ್ ಪಡಿತರ ಚೀಟಿದಾರರಿಗೆ ವಿತರಿಸಲು ಹಂಚಿಕೆ ನೀಡಿದ್ದು, ಸದರಿ ಆಹಾರಧಾನ್ಯಗಳಲ್ಲಿ ವಿತರಣೆಯ ಬಳಿಕ ( 31-3-2010) ಉಳಿದ 264.00 ಕ್ವಿಂಟಲ್ ಅಕ್ಕಿ ಹಾಗೂ 182.25 ಕ್ವಿಂಟಲ್ ಗೋದಿ ಎ.ಪಿ.ಎಲ್ ಆಹಾರಧಾನ್ಯಗಳನ್ನು ಇ.ಬಿ.ಪಿ.ಎಲ್. ಆಗಿ ಪರಿವರ್ತಿಸಲಾಗಿದೆ.
5) **ಭಾವಚಿತ್ರ ಮತ್ತು ಜೀವಮಾಪಕ ಸೆರೆಹಿಡಿಯಲಾದ ಘಟಕಗಳಿಗೆ ಮಾತ್ರ ಪಡಿತರ ಆಹಾರಧಾನ್ಯಗಳನ್ನು ವಿತರಿಸತಕ್ಕದ್ದು.**
6) ಅಂತ್ಯೋದಯ ಯೋಜನೆಯ ಅಕ್ಕಿ ಮತ್ತು ಗೋದಿ ಪೂರ್ಣವಾಗಿ ಎತ್ತುವಳಿ ಮಾಡಿ ಉಳಿಕೆ ಪ್ರಮಾಣವನ್ನು ಕಾಯ್ದಿರಿಸಿಕೊಳ್ಳಲು ಸಗಟು ನಾಮಿನಿದಾರರಿಗೆ ಸೂಚಿಸಿದೆ. ಹಂಚಿಕೆ ಮಾಡಿದ ಆಹಾರ ಧಾನ್ಯಗಳನ್ನು ಯಾವುದೇ ಕಾರಣಕ್ಕೂ ವ್ಯಪಗತ ಮಾಡದಂತೆ ನಿಗದಿತ ಅವಧಿ ಒಳಗೆ ಪೂರ್ಣವಾಗಿ ಎತ್ತುವಳಿ ಮಾಡಿಸತಕ್ಕದ್ದು. ವ್ಯಪಗತ ಮಾಡದಲ್ಲಿ ಉಂಟಾಗುವ ಆರ್ಥಿಕ ನಷ್ಟಕ್ಕೆ ಸಗಟು ನಾಮಿನಿದಾರರನ್ನು ಮತ್ತು ಸಂಬಂಧಪಟ್ಟ ಕಾರ್ಯನಿರ್ವಾಹಕ ಸಿಬ್ಬಂದಿಯವರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.
7) ಆಹಾರಧಾನ್ಯಗಳ ಹಂಚಿಕೆಯ ಪ್ರತಿಯನ್ನು ಸಾರ್ವಜನಿಕ ಸಂಪರ್ಕವುಳ್ಳ ಕಛೇರಿಗಳಲ್ಲಿ ಪ್ರಚುರ ಪಡಿಸಲು ಹಾಗೂ ತಾಲೂಕಿನ ಗೌರವಾನ್ವಿತ ಜನ ಪ್ರತಿನಿದಿಗಳಿಗೂ ಹಾಗೂ ನ್ಯಾಯ ಬೆಲೆ ಅಂಗಡಿಯವರಿಗೆ ಮಾಹಿತಿಯನ್ನು ಒದಗಿಸಲು ಸೂಚಿಸಿದೆ. ಹಂಚಿಕೆಯಲ್ಲಿ ಅನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡಬಾರದು. ನ್ಯಾಯ ಬೆಲೆ ಅಂಗಡಿವಾರು ಪಡಿತರ ಚೀಟಿಗಳ ಬದಲಾವಣೆ ಇದ್ದಲ್ಲಿ ಸಂಬಂದಪಟ್ಟ ದಾಖಲಾತಿಗಳೊಂದಿಗೆ ಮಾಹಿತಿಯನ್ನು ಕೂಡಲೇ ಸಲ್ಲಿಸತಕ್ಕದ್ದು.
8) ಜಿಲ್ಲೆಯ ಎಲ್ಲಾ ತಾಲೂಕಿನ ನ್ಯಾಯ ಬೆಲೆ ಅಂಗಡಿಗಳಲ್ಲಿ ಉಳಿದಿರುವ ಎಪ್ರೀಲ್- 2010 ನೇ ಮಾಹೆಯ ಅಂತಿಮ ಶಿಲ್ಕಿನ ವಿವರಗಳನ್ನು ದಿನಾಂಕ:01-05-2010ರ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
9) ಎತ್ತುವಳಿ ಮಾಡಲಾದ ಆಹಾರಧಾನ್ಯಗಳನ್ನು ಮಾರ್ಗಾಂತರ ಗೊಳ್ಳದಂತೆ ಎಚ್ಚರ ವಹಿಸಿ ವಿತರಿಸಲು ಸೂಚಿಸಿದೆ ಹಾಗೂ ದೂರುಗಳಿಗೆ ಆಸ್ಪದ ನೀಡದೆ ನಿಗದಿತ ದರ ಹಾಗೂ ಪ್ರಮಾಣದಂತೆ ವಿತರಣೆಗೆ ಕ್ರಮ ವಹಿಸುವುದು ತಪ್ಪಿದಲ್ಲಿ ಕಾರ್ಯನಿರ್ವಾಹಕ ಸಿಬ್ಬಂದಿಯವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

ಜಿಲ್ಲಾಧಿಕಾರಿಗಳ ಪರವಾಗಿ
ರಾಯಚೂರು

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ**

1) ಉಪ ನಿರ್ದೇಶಕರು , ಹಾಗೂ ಪಡಿತರ ಅಧಿಕಾರಿಗಳು ರಾಯಚೂರು ನಗರ ರಾಯಚೂರು
2) ಜಿಲ್ಲೆಯ ಎಲ್ಲಾ ತಾಲೂಕಿನ ತಹಸಲ್ದಾರರಿಗೆ
3) ಜಿಲ್ಲಾ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ.ರಾಯಚೂರು
4) ಜಿಲ್ಲಾ ವ್ಯವಸ್ಥಾಪಕರು ಎಫ್.ಸಿ.ಐ. ರಾಯಚೂರು
5) ಜಿಲ್ಲೆಯ ಎಲ್ಲಾ ಕೆ.ಎಫ್.ಸಿ.ಎಸ್.ಸಿ. ಗೋದಾಮು ವ್ಯವಸ್ಥಾಪಕರು
6) ಈ ಕಛೇರಿಯ ಲೆಕ್ಕಾಅಧಿಕ್ಷಕರಿಗೆ

**ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**

1) ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು ಇವರಿಗೆ
2) ಸಹಾಯಕ ಆಯುಕ್ತರು ರಾಯಚೂರು ಮತ್ತು ಲಿಂಗಸೂಗೂರು ಇವರಿಗೆ
3) ಮಾನ್ಯ ಲೊಕ ಸಭಾ ಸದಸ್ಯರು ರಾಯಚೂರು ಮತ್ತು ಕೊಪ್ಪಳ ಇವರಿಗೆ
4) ಜಿಲ್ಲೆಯ ಎಲ್ಲಾ ವಿಧಾನ ಸಭಾ ಸದಸ್ಯರವರಿಗೆ
5) ಜಿಲ್ಲೆಯ ವಿಧಾನ ಪರಿಷತ ಸದಸ್ಯರರವರಿಗೆ

ಜಿಲ್ಲಾಧಿಕಾರಿಗಳ ಪರವಾಗಿ
ರಾಯಚೂರು